

ಸಂಗಾತಿಯನ್ನು ಬೆನ್ನು ಮುಂದೆಮಾಡಿ ಸಮೀಪಿಸುತ್ತಿದ್ದರೆ ಏನಾಗಬಹುದು?

ಡಾ.ವಿನೋದ ಛೆಬ್ಬಿ

# 33: ಆತಂಕಭಾವ–ಕ್ರೋಧಭಾವ

ವಿದೇಶದಿಂದ ದಾಂಪತ್ಯ ಚಿಕಿತ್ಸೆಗೆಂದು ಬಂದ ಈ ದಂಪತಿಯದು ವಿಚಿತ್ರ ಕಥೆ. ಅರಸಿ ಹಾಗೂ ಅಂಬಿಯ (ಹೆಸರುಗಳು ಕಾಲ್ಪನಿಕ) ಜೋಡಿ ತಾವೇ ಆರಿಸಿಕೊಂಡದ್ದಾದರೂ ಪ್ರೇಮವಿವಾಹವಲ್ಲ. ಇವಳಿಗೆ ಮದುವೆ ಬೇಕಿತ್ತು. ಅವನಿಗೆ ಅಷ್ಟಾಗಿ ಬೇಕಿರಲಿಲ್ಲ. ಈಗ ಸಮಸ್ಯೆ ಏನೆಂದರೆ ಅರಸಿ ಅಂಬಿಯನ್ನು ನಂಬದೆ, ತಿರಸ್ಕರಿಸುತ್ತ ಆರೋಪಿಸುತ್ತ ಶಾರೀರಿಕ ಹಿಂಸೆಗೆ ಒಳಪಡಿಸುತ್ತಿದ್ದಾಳೆ. ಪ್ರೀತಿ ತೋರುವುದಿಲ್ಲವೆಂದು ದೂರುತ್ತಾಳೆ. ತೋರಲು ಹೋದರೆ ತೋರಿಕೆಯದು ಎಂದು ದೂರ ತಳ್ಳುತ್ತಿದ್ದಾಳೆ. ದೂರ ಉಳಿದರೆ ಆರೋಪಿಸಿ ಹಿಂಸೆಗೆ ಒಳಪಡಿಸುತ್ತಾಳೆ. ಆಕೆಗೆ ಹೇಗೆ ಸ್ಪಂದಿಸಬೇಕೆಂದು ತಿಳಿಯದೆ ಅಂಬಿ ವ್ಯಾಕುಲಗೊಂಡಿದ್ದಾನೆ. ಇವನಿಂದ ತನಗೇನೂ ಸುಖ ಸಿಗುತ್ತಿಲ್ಲ ಎಂದು ಅರಸಿ ದೂರುತ್ತಿದ್ದಾಳೆ. ಇವರಿಬ್ಬರ ಹಿನ್ನೆಲೆ ತಿಳಿಯೋಣ.

ಅರಸಿಯ ಅಮ್ಮನಿಗೆ ಮುಂಚಿನಿಂದಲೂ ಮಾನಸಿಕ ಕಾಯಿಲೆ ಇತ್ತಂತೆ. ಅರಸಿ ಹುಟ್ಟಿದ ಮೂರು ತಿಂಗಳಿಗೆ ಅಮ್ಮ ನಾಲ್ಕು ವರ್ಷದ ಮಗನನ್ನು ಕಳೆದುಕೊಂಡು ಖಿನ್ನತೆಗೆ ಒಳಗಾದವಳು ಯಾವೊತ್ತೂ ಚೇತರಿಸಿಕೊಳ್ಳಲಿಲ್ಲ. ಸದಾ ಒಂದೋ ಮಗಳನ್ನು ನೋಡುತ್ತ ಮಗನನ್ನು ನೆನೆಸಿಕೊಂಡು ಅಳುವುದು, ಅಥವಾ ಮಗಳಿಂದ ದೂರವಾಗಿ ಒಂಟಿಯಾಗಿ ಅಳುವುದು ಇಷ್ಟೇ ಮಾಡುತ್ತಿದ್ದಳು. ಅಮ್ಮ ಅಸಮಾಧಾನ ತೋರುತ್ತಾಳೋ, ದೂರೀಕರಿಸುತ್ತಾಳೋ, ದೈನ್ಯತೆಯಿಂದ ಅಳುತ್ತಾಳೋ ಹೇಳಲಿಕ್ಕಾಗದ ಅವಸ್ಥೆಯಲ್ಲಿ ಅರಸಿಯ ಬಾಲ್ಯ ಕಳೆಯಿತು. ಮೂರು ವರ್ಷಕ್ಕೆ ಅಮ್ಮ ಅಂದರೆ ತಾಳಲಾರೆ ಎನ್ನುವಂತಾಯಿತು. ಹಸಿವೆಯಿಂದ ಕಾಯುತ್ತಿರುವಾಗ ಅಡುಗೆ ಮಾಡುವ ಅಮ್ಮನಿಗೆ ಕೈಕಾಲು ಸೋತಂತಾಗಿ, ಅರಸಿಗೇ ಅಡುಗೆ ಮಾಡಲು ಹಚ್ಚಿದ್ದಿದೆ. ಹೀಗೆ ಅಮ್ಮನಿಂದ ಸಹಾಯ ಬಯಸಬೇಕೇ ಅಥವಾ ಆಕೆಗೆ ಸಹಾಯ ಮಾಡಬೇಕೇ ಎಂದು ಗೊಂದಲಗೊಂಡ ಸಂದರ್ಭಗಳು ಸಾಕಷ್ಟಿವೆ.

ಇನ್ನು ಅರಸಿಯ ಅಪ್ಪ? ಇದು ಯಾವಾಗ ಶುರುವಾಯಿತೋ ಗೊತ್ತಿಲ್ಲ, ಆದರೆ ಅರಸಿಗೆ ಬುದ್ಧಿ ತಿಳಿದಾಗ ಅಪ್ಪ ಇವಳನ್ನು ಆಗಾಗ ತನ್ನ ಲೈಂಗಿಕ ತೃಪ್ತಿಗೆ ಬಳಸಿಕೊಳ್ಳುತ್ತಿದ್ದ. ಮೊದಮೊದಲು ಇವಳಿಗೆ ಗೊತ್ತಾಗದಂತೆ ನಡೆಸುತ್ತಿದ್ದವನು ಬರಬರುತ್ತ ಅವಳನ್ನು ರಾಜಾರೋಷದಿಂದ ಕರೆಯುತ್ತಿದ್ದ. ಅಷ್ಟಿದ್ದರೂ ಅವಳ ಕಾಳಜಿ ಮಾಡುತ್ತಿದ್ದ. ಅಪ್ಪ ಚಾಕಲೇಟ್, ಆಟಿಕೆ ಅಥವಾ ಹೊಸಬಟ್ಟೆ ತಂದ ದಿನ ಇವಳಿಗೆ ಗೊತ್ತು, ಆತ ತನ್ನನ್ನು ಇವೊತ್ತು ಬಳಸಿಕೊಳ್ಳುತ್ತಾನೆ ಅಂತ. ಹೀಗಿದ್ದರೂ ಅಪ್ಪನನ್ನೇ ಇಷ್ಟಪಡುತ್ತಿದ್ದಳು. ಯಾಕೆ? ಹಿಂಸಿಸಿದರೂ ಚೆನ್ನಾಗಿ ನೋಡಿಕೊಳ್ಳುತ್ತಿದ್ದನಲ್ಲ? ಅದು ಅಮ್ಮ ಕೊಡುವ ತಂಗಳನ್ನಕ್ಕಿಂತ ಎಷ್ಟೋ ಮಿಗಿಲು. ಹಾಗಾಗಿ ಅಪ್ಪನನ್ನು ಆರ್ತತೆಯಿಂದ ಬಯಸಿದರೂ ಮನದೊಳಗೆ ಕಿಚ್ಚಿತ್ತು. ತೋರಿಕೆಯ ಕಾಳಜಿ ತೋರಲು ಬಂದವರ ಮೇಲೆ ದ್ವೇಷ ಉಕ್ಕುತ್ತಿತ್ತು. ರಕ್ಷಣೆಯ ನಂತರದ ಭಕ್ಷಣೆಯ ಉದ್ದೇಶ ಕಾಣುತ್ತಿರುವಾಗ ರಕ್ಷಿಸಲು ಬಂದವರನ್ನು ಶಿಕ್ಷಿಸುವ ಕಠೋರಭಾವ ಹುಟ್ಟಿತು. ವ್ಯವಸ್ಥೆಯನ್ನು ಧಿಕ್ಕರಿಸಿ ಇವಳು ಹದಿವಯಸ್ಸಿನಲ್ಲಿ ಹುಡುಗನೊಂದಿಗೆ ಓಡಿಹೋದಳು. ಹುಡುಗ ಇವಳನ್ನು ಉಪಯೋಗಿಸಿಕೊಂಡು ಕೈಕೊಟ್ಟಾಗ ಅನಿವಾರ್ಯವಾಗಿ ಹಿಂತಿರುಗಿ ಬಿಸಿ ಏಟುಗಳಿಗೆ, ತಂಗಳನ್ನಕ್ಕೆ, ತಣ್ಣಗಿನ ಕೈಗಳಿಗೆ ಮೈ ಒಪ್ಪಿಸಿಕೊಂಡಿದ್ದಳು. ಇದಕ್ಕೆಲ್ಲ ಮೂಕ ಸಾಕ್ಷಿಯಾಗಿ ಸಹಾಯಕ್ಕೆ ಬರದ ಅಮ್ಮನಿಗೆ ದೊಡ್ಡವಳಾದ ಮೇಲೆ ನಿನಗೆ ಬುದ್ಧಿ ಕಲಿಸುತ್ತೇನೆ! ಎಂದು ಅವಡುಗಚ್ಚಿದ್ದಳು. ಮನದಾಳದಲ್ಲಿ ಪೋಷಿಸುತ್ತಿದ್ದ ಶಿಕ್ಷಾಭಾವಕ್ಕೆ ತಕ್ಕ ಹುಡುಗನ ಹುಡುಕಾಟದಲ್ಲಿದ್ದಳು. ಆಗ ಸಿಕ್ಕಿದ್ದು ಅಂಬಿ.

ಅಂಬಿಯ ಬಾಲ್ಯ ಆತಂಕಮಯ. ಅಸಾಧ್ಯ ಬೇಡಿಕೆಗಳನ್ನು ಮುಂದಿಟ್ಟು ಶಿಕ್ಷಿಸುವ ಅಪ್ಪ, ಅಪ್ಪನಿಗೆ ಭಯಪಟ್ಟು ಆಸರೆಗಾಗಿ ಮಗನನ್ನೇ ತಬ್ಬಿಕೊಳ್ಳುವ ಅಮ್ಮ ಅವನಿಗಿದ್ದರು. ಅತಿಚಿಕ್ಕ ವಯಸ್ಸಿನಿಂದಲೇ ಅಮ್ಮನ ಆತಂಕದಲ್ಲಿ ಪಾಲುಗೊಳ್ಳುವ, ಹಾಗೂ ನಂತರ ಎದೆ ಡವಗುಟ್ಟುತ್ತಿದ್ದರೂ ಅಮ್ಮನಿಗೆ ಧೈರ್ಯಕೊಡುವ ಕೆಲಸ ಅಂಬಿಯದಾಯಿತು. ಅಮ್ಮನ ಹತ್ತಿರವಿದ್ದರೂ ನೆಮ್ಮದಿಯಿಂದ ಇರಲಿಕ್ಕಾಗದೆ ಆಕೆಯನ್ನು ಸದಾ ಆತಂಕದಿಂದ ಗಮನಿಸುವ ಹಾಗಾಯಿತು.

ಅರಸಿ, ಅಂಬಿ ಮದುವೆಯಾಗಿದ್ದೂ ಒಂದು ವಿಚಿತ್ರ ಕಥೆ. ಸ್ನೇಹಿತನೊಬ್ಬನ ಹುಟ್ಟುಹಬ್ಬದ ಮೂಲಕ ಪರಿಚಯವಾದರು. ಒಂದು ದಿನ ಅರಸಿ ಉದ್ಯಾನದಲ್ಲಿ ಅಳುತ್ತಿರುವಾಗ ಅಂಬಿ ಆತಂಕದಿಂದ ಅವಳನ್ನು ವಿಚಾರಿಸಿದ. ಆಕೆ ಗೋಳು ಹೇಳಿಕೊಳ್ಳುವಾಗ ಇವನು ಆಲಿಸಿದ. ಹೀಗೆ ಅವರಿಬ್ಬರೂ ಹತ್ತಿರವಾದರು. ಅರಸಿ ಅಳುವಾಗ ಅಂಬಿ ಸಾಂತ್ವನಗೊಳಿಸಲು ಅವಳನ್ನು ತಬ್ಬಿಕೊಳ್ಳುತ್ತಿದ್ದ. ಅವಳು ಕೊಸರಿಕೊಂಡು ದೂರವಾಗಿ ಅಳುತ್ತಿದ್ದಳು. ಇವನು ತಬ್ಬಿಬ್ಬಾಗಿ ದೂರ ಕುಳಿತಾಗ ಅವಳು ನಿಧಾನಕ್ಕೆ ಇವನ ಹತ್ತಿರ ಸರಿದು ಅಳುತ್ತಿದ್ದಳು. ಅವಳ ತಲೆಯನ್ನು ಇವನು ತನ್ನ ಹೆಗಲಮೇಲೆ ತಂದಾಗ ಇವಳು ಸೆಟೆದು ಕೂಡುತ್ತಿದ್ದಳು. ಇವನು ಒತ್ತಾಯದಿಂದ ಅವಳನ್ನು ಎಳೆದುಕೊಂಡಾಗ ಆಕೆ ಪ್ರತಿರೋಧ ತೋರುತ್ತ ನೀವೆಲ್ಲ ಗಂಡಸರು ಹೆಣ್ಣನ್ನು ದುರುಪಯೋಗ ಮಾಡಿಕೊಳ್ಳುತ್ತೀರಿ ಎಂದು ದೂರುತ್ತಿದ್ದಳು. ಇದು ಅಂಬಿಗೆ ಒಂದು ಗಲಿಬಿಲಿ ಸವಾಲಾಗಿತ್ತು. ನಿನ್ನ ಕೈಲಿ ನನ್ನನ್ನು ನೋಡಿಕೊಳ್ಳಲು ಆಗುವುದಿಲ್ಲ ಎಂದು ಅವಳೆಂದರೆ, ಯಾಕಿಲ್ಲ ಪರೀಕ್ಷಿಸು ಎಂದು ಅವನು ಹೇಳುವಂತಿತ್ತು. ಒಂದು ತಡಸಂಜೆ ಈ ಪ್ರಸಂಗ ನಡೆಯುತ್ತಿದ್ದಾಗ ಪೊಲೀಸರ ಕಣ್ಣಿಗೆ ಬಿದ್ದು ಠಾಣೆಗೆ ಹೋಗಬೇಕಾಯಿತು. ವಿಚಾರಣೆಯಲ್ಲಿ ಅವಳು ತಕ್ಷಣ ಮದುವೆಗೇ ಒಪ್ಪಿಕೊಂಡಳು. ಅಂಬಿಗೆ ಇದು ತೀರ ಅನಿರೀಕ್ಷಿತ ಆದರೂ ಅವನೂ ಒಪ್ಪಿದ.

ಮದುವೆಯು ಅವರ ವಿಸ್ಫೋಟಕರ ಸಂವಹನಕ್ಕೆ ನಾಂದಿಯಾಯಿತು.

ಮದುವೆಯಾದ ಕೂಡಲೇ ಅಂಬಿ ವಿದೇಶಕ್ಕೆ ಹೋಗಬೇಕಾಯಿತು. ಅಲ್ಲಿಗೆ ಅರಸಿಯನ್ನು ಕರೆಸಿಕೊಳ್ಳುವ ಯೋಜನೆಯಿತ್ತು. ಅವನನ್ನು ಬಿಟ್ಟಿರದ ನಿತ್ಯ ಅಳು, ಗೋಳು ಅವಳದು. ಮೂರು ತಿಂಗಳಿಗೆ ಪಾಸ್‌ಪೋರ್ಟ್, ವಿಸಾ ಸಿಕ್ಕಿದಾಗ ಇಷ್ಟು ಕಷ್ಟಪಡಬೇಕಿತ್ತೆ ಅಂತಲ್ಲದೆ, ಅಂಬಿ ತನ್ನನ್ನು ನಿತ್ಯವೂ ಕರೆಮಾಡಲಿಲ್ಲ, ಹಾಗಾದರೆ ತನ್ನನ್ನು ಹೇಗೆ ನೋಡಿಕೊಳ್ಳುವನೋ ಎಂದು ಸಂದೇಹ. ಅವನು ಆತಂಕದ ಮನವೊಲಿಕೆಗೆ ಪ್ರತಿಯಾಗಿ ಇವಳ ಅಪನಂಬಿಕೆಯ ತಿರಸ್ಕಾರ. ಅಂಬಿ ಗಾಬರಿಯಾಗಿ ನನ್ನನ್ನು ಭೇಟಿಮಾಡಲು ಸಲಹೆಕೊಟ್ಟ. ಮೊದಲ ಭೇಟಿಯಲ್ಲಿ ಆಕೆ ಹೇಳಿದ್ದು: ಇಂಥವನ ಜೊತೆಗೆ ನಾನಿರಲಾರೆ. ಡೈವೋರ್ಸ್ ಕೊಡಿಸಿ! ಮರುದಿನ ದಿಕ್ಕು ಬದಲಿಸಿ, ನಾನು ಜೀವನದಲ್ಲೇ ಅತ್ಯಂತ ಪ್ರೀತಿಸುವವ ಅಂಬಿಯೊಬ್ಬನೆ. ಹಾಗಾಗಿ ನಾನೀಗಲೇ ಅವನನ್ನು ಸೇರಬೇಕು! ಎಂದಳು. ನನ್ನೆದುರೇ ಅವನಿಗೆ ಕರೆಮಾಡಿ, ಮರುದಿನವೇ ಹೊರಡುತ್ತೇನೆ ಎಂದಳು. ಅವನು ಎರಡು ವಾರದ ನಂತರದ ಟಿಕೆಟ್‌ಗೆ ಖರ್ಚು ಕಡಿಮೆ ಎಂದಾಗ, ನನಗಿಂತ ಹಣ ಹೆಚ್ಚಾಯಿತೆ? ಎಂದು ಕೂಗಾಡಿ ನನ್ನೆದುರೇ ಮೂರುಪಾಲು ಬೆಲೆತೆತ್ತು ಟಿಕೆಟ್ ತೆಗೆಸಿದಳು.

ವಿದೇಶಕ್ಕೆ ಕಾಲಿಟ್ಟು ಗಂಡನ ಮುಖ ನೋಡಿದ್ದೇ ತಡ ಅವನ ಕೆನ್ನೆಗೆ ಬಾರಿಸಿದ್ದಾಳೆ. ಮನೆ ಸೇರಿದಾಗ ಗಂಡನನ್ನು ಹಾಸಿಗೆಗೆ ಕರೆದಿದ್ದಾಳೆ. ಅವನಿಗೆ ಶೀಘ್ರಸ್ಖಲನ ಆದಾಗ ಒದ್ದಿದ್ದಾಳೆ. ನಂತರ ಈಗಲೇ ನನ್ನನ್ನು ತೃಪ್ತಿಪಡಿಸು ಎಂದು ಬನಿಯನ್ ಹಿಡಿದು ಎಳೆದಾಡಿದ್ದಾಳೆ. ಮರುವಾರವೇ ಅವರಿಬ್ಬರೂ ನನ್ನ ಭೇಟಿಗೆ ಬಂದಿದ್ದಾರೆ. ಅಂಬಿಯ ಎರಡೂ ಕೆನ್ನೆಗಳ ಉದ್ದಕ್ಕೂ ಪರಚಿದ ಗಾಯಗಳಿವೆ. ಚಿಕಿತ್ಸೆ ನಡೆಯುವಾಗ ಬದಲಾಗಲು ಧಿಕ್ಕರಿಸಿ ತವರುಮನೆಗೆ ಹೋಗಿದ್ದಾಳೆ. ಇವನು ಹತಾಶೆಯಿಂದ ವಿಮಾನ ನಿಲ್ದಾಣಕ್ಕೆ ಹೋದಾಗ ಅಲ್ಲಿ ಇವನಿಗೋಸ್ಕರ ಕಾಯುತ್ತಿದ್ದಾಳೆ.

ನಿನ್ನನ್ನು ನಂಬಲಾರೆ ಎನ್ನುತ್ತ ಬೆನ್ನು ತಿರುಗಿಸಿ ಹತ್ತಿರವಾಗುವ, ಹತ್ತಿರವಾದ ಸಂಗಾತಿಯನ್ನು ಶಿಕ್ಷಿಸುವ, ಸಂಗಾತಿ ಇಲ್ಲದಾಗ ಕಂಗಾಲಾಗುವ ಹೆಂಡತಿ, ಹಾಗೂ ಹತ್ತಿರವಾದ ಹೆಂಡತಿಯನ್ನು ಸಂತೈಸದಿದ್ದರೆ ಜಗತ್ತೇ ಮುಳುಗುತ್ತದೆ ಎನ್ನುವ ಗಂಡ– ಇವಳು ಗಂಡನಲ್ಲಿ ಅಪ್ಪನನ್ನು, ಹಾಗೂ ಅವನು ಹೆಂಡತಿಯಲ್ಲಿ ತಾಯಿಯನ್ನು ಕಾಣುತ್ತಿದ್ದಾರೆಯೆ?

ದಿಟ್ಟ ಸವಾಲಾದ ಈ ದಾಂಪತ್ಯವನ್ನು ಸರಿದಾರಿಗೆ ತರಲು ಹೇಗೆ ಸಾಧ್ಯವಾಯಿತು ಎಂಬುದು ರೋಚಕ ಕಥೆ.

**ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಬೆಳಿಗ್ಗೆ 11ರಿಂದ ಸಂಜೆ 5ರ ತನಕ ಕರೆಮಾಡಿ.**

**ಲೇಖಕರ ವಿಳಾಸ: www.medisex.org**